ನಡೆಯಿರಿ ಎಂದು ಹೇಳುತ್ತಾರೆ. ಈ ರೀತಿ ಆದರೆ ಸರ್ಕಾರದ ಹಣದ ಗತಿ ಏನು ? ಆ ಹಣವನ್ನು ವಸೂಲ್ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಎಂ. ವೀರಪ್ಪಮೊಯ್ಲಿ.—ಕಾನೂನು ಕಕ್ಷೆಯಿಂದ ತಪ್ಪಿತಸ್ಥರು ಹೊರಗೆ ಹೋಗಲು ಪ್ರಯತ್ನ ಮಾಡುತ್ತಾರೆಂದು ತಿಳಿದು ಅವರು ತಪ್ಪಿಸಿಕೊಳ್ಳದಂತೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ತಿಮ್ಮೇಗೌಡರು.—ಸಹಕಾರಿ ಆಕ್ಟ್ ಪ್ರಕಾರ ತಾವು ಏನು ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕು ಎನ್ನುವ ಮನಸ್ಸು ಇದ್ದರೂ ಕಾನೂನಿಗೆ ಒಳಪಡಿಸುವುದರಿಂದ ನಿಧಾನವಾಗುತ್ತಿರುವುದರಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಕೆಲವು ಸಲ ಸಜೆಷನ್‌ಗಳನ್ನು ಕೂಡ ಕೊಟ್ಟಿದ್ದೇವೆ. ಆಕ್ಟ್‌ನಲ್ಲಿ ಡೈರೆಕ್ಟರ್ಸ್ ಏನಾದರೂ ಅಡ್ಡಿ ಮಾಡಿದರೆ ಅವರೂ ಕೂಡ ಶಿಕ್ಷಾರ್ಹರಾಗುತ್ತಾರೆ. ಆದ್ದರಿಂದ ಸಂಸ್ಥೆಯಲ್ಲಿ ಅಗತಕ್ಕಂಥ ನಷ್ಟಗಳಿಗೆ ಡೈರೆಕ್ಟರ್ಸ್ ಜವಾಬ್ದಾರರಾಗುತ್ತಾರೆಂದು ಕೋ ಆಪರೇಟೀವ್ ಆಕ್ಟ್‌ನಲ್ಲಿ ಅಳವಡಿಸುವುದಕ್ಕೆ ತಾವು ಯೋಚನೆ ಮಾಡುತ್ತೀರಾ ಸ್ವಾಮಿ?

ಶ್ರೀ ಎಂ. ವೀರಪ್ಪಮೊಯಿಲಿ.—ನಮ್ಮ ಸಹಕಾರಿ ಆಕ್ಟ್‌ನಲ್ಲಿ ಸರ್‌ಚಾರ್ಜ್ ಹಾಕಲಿಕ್ಕೆ ಪ್ರಾವಿಷನ್ ಇದೆ. ಅಭಿಪ್ರಾಯವನ್ನು ಬದಲಿಸಬೇಕೆಂದು ಹೇಳಲಿಲ್ಲ. ಸರ್‌ಚಾರ್ಜ್ ಹಾಕಿರುವುದರಿಂದ ಯಾರೂ ಮುಂದೆ ಹೋಗದಂತೆ ಮಾಡಿದ್ದೇವೆ. That provision has been used May be it may not have been effectively used. ಈ ಬಗ್ಗೆಯೂ ಕೂಡ ಸರ್ಕಾರದಲ್ಲಿ ಪ್ರಾವಿಷನ್ ಇದೆ. ಕಾನೂನು ತಳಹದಿಯಲ್ಲಿ ಮಾಡುತ್ತಿದ್ದೇವೆ. ಆದರೆ ಮಾಡತಕ್ಕಂಥದ್ದು ನಿಧಾನ ಮಾಡಿದ್ದರೆ ಅಂಥ ಕೇಸ್‌ಗಳಲ್ಲಿ ಅದನ್ನು ಮಾಡುವಂತ ಮಾಡುತ್ತೇವೆ. ಸರ್‌ಚಾರ್ಜ್‌ಸ್ ಸಹ ಇದೆ.

ಶ್ರೀ ಡಾ॥ ತಿಮ್ಮೇಗೌಡ.—ಇರತಕ್ಕಂಥ ಕಾನೂನನ್ನಾದರೂ ಎಫ್‌ಕ್ಟೀವ್ ಆಗಿ ಇಂಪ್ಲಿಮೆಂಟ್ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾಡುತ್ತೇವೆ.

ಶ್ರೀ ಎಚ್. ಗಂಗಾಧರನ್.—ಮೂರು ವರ್ಷಗಳಿಂದಲೂ ಈ ಸದನದಲ್ಲಿ ಹೇಳಿಗುತ್ತೇವೆ. ಆಡಿಟರ್ಸ್ ಸಂಖ್ಯೆ ಕಡಿಮೆ ಇರುತ್ತದೆ, ಅದನ್ನು ಜಾಸ್ತಿ ಮಾಡಿ ಎಂದು. ಇದುವರೆಗೆ ಜಾಸ್ತಿ ಮಾಡಿದ್ದು ಕಾಣಿಲ್ಲ. ಇದರ ಬಗ್ಗೆ ಏನು ಮಾಡುತ್ತೀರಿ ಹೇಳಬೇಕು. ಎಲ್ಲ ಪಿ. ಎಲ್. ಡಿ. ಬ್ಯಾಂಕ್‌ಗಳಲ್ಲೂ ಮಿಸ್ ಅಪ್ರಾಪ್ರಿಯೇಷನ್ ಆಗಿರತಕ್ಕಥಂದ್ದು ೩೮,೯೯೦ ಲಕ್ಷ ರೂಪಾಯಿಗಳು.ಪಿ. ಎಲ್. ಡಿ. ಬ್ಯಾಂಕ್ ಕೊಳ್ಳೆಗಾಲದಲ್ಲಿ ೧,೭೦.೩೧೨ ಮಿಸ್ ಆಪ್ರಾಪ್ರಿಯೇಷನ್ ಆಗಿರುತ್ತದೆಂದು ಹೇಳಿರುತ್ತೇನೆ. ಈ ಮಿಸ್ ಅಪ್ರಾಪ್ರಿಯೇಷನ್ ತುಂಬಲು ಏನು ಪ್ರಯತ್ನ ಮಾಡಿದ್ದೀರಿ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸದಸ್ಯರು ಹೇಳಿದಂತೆ ಆಡಿಟರ್ಸ್ ಸಂಖ್ಯೆ ಜಾಸ್ತಿ ಮಾಡಬೇಕೆಂದು ಹೇಳಿರುತ್ತಾರೆ. ಸರ್ಕಾರದವರು ಈ ಕೊರತೆಯನ್ನು ಮನಗಂಡು ನೋಟಿಫಿಕೇಷನ್ ಹೊರಡಿಸಿ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಆರ್ಜಿಗಳನ್ನು ಕರೆದಿದ್ದಾರೆ. ಆದಷ್ಟು ಜಾಗ್ರತೆ ರಿಕ್ರೂಟ್‌ಮೆಂಟ್ ಮಾಡುತ್ತೇವೆಂದು ಹೇಳುತ್ತೇನೆ.

Recruitment of Officers/Officials in Bangalore City Corporation.

47 SRI P. RAMDEV (Malleswaram)—Will the Minister for Housing and Urban Development be pleased to state :—

(a) the number of appointments made to Class II, III and IV Grades in the Bangalore City Corporation for the last 3 years;

(b) the particulars of Grades and the number of posts against which these appointments have been made;

(c) the norms and rules followed while making these appointments;

(d) the officer who has made these appointments or whether any Committee has been appointed to make selections for these posts ?

SRI DHARAM SINGH—(Minister for Housing and Urban Development).—

(a) Total 785 candidates have been, appointed in Bangalore City Corporation. The particulars are as follows :

(1)	Class II	13
(2)	Class III	114
(3)	Class IV	658
		785

* (b) Detailed statement is laid on the Table of the House.

(c) Appointments have been made according to the Karnataka Municipal Corporations Act, 1976. The Karnataka Municipal Corporation Rules, 1977 and the Bangalore City Corporation Recruitment Rules.

(d) (1) The Government will make appointment to the Class II posts through the Karnataka Publie Service Commission.

(2) Appointment to Class III posts will be made through Recruitment Committee of the Bangalore City Carporation.

(3) The Commissioner of City Corporation will make appointments to the Class IV posts.

ಶ್ರೀ ಪಿ. ರಾಮದೇವ್.—ಕಾರ್ಪೊರೇಷನ್ ಆಕ್ಟ್ ೧೯೭೬–೭೭ನೇ ನಿಯಮಾವಳಿಯ ಪ್ರಕಾರ ಅಪಾಯಿಂಟ್‌ಮೆಂಟ್ ಮಾಡುತ್ತಿದ್ದೇವೆಂದು ಹೇಳಿರುತ್ತೀರಿ. ಆದರೆ ತಾವು ಕೊಟ್ಟಿರುವ ೧೯೭೬–೭೭ನೇ ನಿಯಮಾವಳಿ ಅದಿನಿಯಮಾವಳಿ ಪ್ರಕಾರ ನೇಮಕಾತಿಗಳನ್ನು ಮಾಡಿರತಕ್ಕಂಥದ್ದು ನಿಯಮಾವಳಿಗೆ ಸಂಬಂಧಪಡುತ್ತಿಲ್ಲ. ಆದ್ದರಿಂದ ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಯಾವ ನಿಯಮಾವಳಿ ಪ್ರಕಾರ ರಿಕ್ರೂಟ್‌ಮೆಂಟ್ ನಡೆಯುತ್ತಿದೆ ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್.—ಅಲ್ಲಿ ಅಧ್ಯಕ್ಷರು ಕಾರ್ಪೊರೇಷನ್‌ನಲ್ಲಿ ನೇಮಕಾತಿ ಮಾಡತಕ್ಕಂಥದ್ದು ಇರುತ್ತದೆ. ಕ್ಲಾಸ್ ೨ ಹುದ್ದೆಗಳಿಗೆ ಪಬ್ಲಿಕ್ ಸರ್ವಿಸ್ ಕಮಿಷನರ್‌ರವರು ಮಾಡತಕ್ಕಂಥದ್ದು ಇರುತ್ತದೆ. ಕ್ಲಾಸ್ ೩ ಹುದ್ದೆಗಳಿಗೆ ಡೆವಲಪ್‌ಮೆಂಟ್ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ರಿಕ್ರೂಟ್‌ಮೆಂಟ್ ಮಾಡುತ್ತಾರೆ. ಕ್ಲಾಸ್ ೪ ಹುದ್ದೆಗಳಿಗೆ ಕಮಿಷನರ್‌ರವರಿಗೆ ಅಧಿಕಾರವಿರುತ್ತದೆ.

ಶ್ರೀ ಪಿ. ರಾಮ್‌ದೇವ್.—ರೂಲ್ ೭೬–೭೭ ಎಲ್ಲಿದೆ.

ಶ್ರೀ ಧರ್ಮಸಿಂಗ್.—ಉತ್ತರದಲ್ಲಿ ಕೊಟ್ಟಿರತಕ್ಕಂಥದ್ದು ತಪ್ಪು ಇರುತ್ತದೆ. ಇಲ್ಲಿ ಹಾಗಿಲ್ಲ. ಏನಾಗಿದೆ ಎಂದರೆ ಕ್ಲಾಸ್ ೨ ಪಬ್ಲಿಕ್ ಸರ್ವೀಸ್ ಕಮಿಷನರ್‌ರವರು ರಿಕ್ರೂಟ್‌ಮೆಂಟ್ ಮಾಡತಕ್ಕಂಥದ್ದು ಡಾಕ್ಯುಮೆಂಟ್ ಇದರಲ್ಲಿ ಬರುತ್ತಾರೆ. ಕ್ಲಾಸ್ ೩ ರಿಕ್ರೂಟ್‌ಮೆಂಟ್ ಕಮಿಟಿ ಇರುತ್ತದೆ. ಕ್ಲಾಸ್ ೪ ಗೆ ಕಾರ್ಪೊರೇಷನ್‌ಗಳ ಕಮಿಷನರ್‌ಗೆ ಅಧಿಕಾರವಿರುತ್ತದೆ.

ಶ್ರೀ ಪಿ. ರಾಮದೇವ್.—ತಾವು ೧೯೭೭–೭೮ರಲ್ಲಿ ಅಸಿಸ್ಟೆಂಟ್ ಸರ್ಜನ್ಸ್ ೧೯೧ ಜನ ಅಸಿಸ್ಟೆಂಟ್ ಸ್ವಿಮ್ಮಿಂಗ್ ಆಫೀಸರ್ಸ್ ೨೦೮ ಜನ ಮತ್ತು ೭೮–೭೯ ಕ್ಕೆ ೩೨೪ ಜನ ಒಟ್ಟಿ ೭೮೫ ಜನ ಅಭ್ಯರ್ಥಿಗ

ಳನ್ನು ಬೆಂಗಳೂರು ನಗರ ಕಾರ್ಪೊರೇಷನ್‌ಗೆ ನಾಲ್ಕು ವರ್ಷದ ಅವಧಿಯಲ್ಲಿ ಕೆಲಸ ಕೊಟ್ಟಿದ್ದೀರಿ. ಸ್ವಾಮಿ, ಆಕ್ಟ್ರಾಯ್ ಅಬಾಲಿಷ್ ಮಾಡಿದ್ದರಿಂದ ಎಂಟಸೂರು ಜನ ಸರ್ಪಲಸ್ ಸ್ಟಾಫ್ ಇದೆ ಎಂದು ಹೇಳಿ ಅವರನ್ನು ಭರ್ತಿ ಮಾಡಿಕೊಳ್ಳುವತನಕ ರಿಕ್ರೂಟ್‌ಮೆಂಟ್ ಮಾಡುವುದಿಲ್ಲವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಆ ಆಶ್ವಾಸನೆಯನ್ನು ಮುರಿಯುವುದಕ್ಕೆ ಕಾರಣವೇನು, ಸ್ವಾಮಿ?

ಶ್ರೀ ಧರ್ಮಸಿಂಗ್.—ಆಕ್ಟ್ರಾಯ್‌ಗೆ ಸಂಬಂಧಪಟ್ಟಂತೆ ೬೫೯ ಜನರು ಇದ್ದರು. ಇವರ ಪೈಕಿ ೩೨೯ ಜನರಿಗೆ ಈಗಾಗಲೇ ಕೆಲಸ ಕೊಟ್ಟಿದ್ದೇವೆ. ಉಳಿದ ಜನರಿಗೆ ಕೊಡಬೇಕಾಗಿತ್ತು. ರಾಜ್ಯದಲ್ಲಿರುವ ತಕ್ಕಂಥ ಎಂಟು ಸಾವಿರ ಆಕ್ಟ್ರಾಯ್ ಸಿಬ್ಬಂದಿ ಏನು ಇದ್ದಾರೆ ಅವರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಂತಿದ್ದೇವೆ. ಆದ್ಯತೆಯ ನಂತರ ಬೇರೆಯವರಿಗೆ ಅವಕಾಶವನ್ನು ಕೊಡಬೇಕು ಎನ್ನುವ ರೀತಿಯಲ್ಲಿ ಡಿಸ್‌ಕಷನ್ ತೆಗೆದು ಕೊಂಡಿದ್ದೇವೆ. ಈಗ ಏನಾಗಿದೆ ಎಂದರೆ ಪಬ್ಲಿಕ್ ಸರ್ವೀಸ್ ಕಮಿಷನರ್ ಡಾಕ್ಟರ್ಸ್‌ಗಳನ್ನು ರಿಕ್ರೂಟ್‌ಮೆಂಟ್ ಮಾಡುವತನಕ ಲೋಕಲ್ ಕ್ಯಾಂಡಿಡೇಟನ್ನು ಮುಂದುವರಿಸಿ ಜೂನಿಯರ್ ಡಾಕ್ಟರ್ಸ್‌ಗಳಿಗೆ ಸೀನಿಯಾರಿಟಿ ಪ್ರಕಾರ ಪ್ರಾಶಸ್ತ್ಯ ಕೊಟ್ಟಿರುತ್ತೇವೆ. ಕ್ಲಾಸ್ ೩ ಟೈಪಿಸ್ಟ್ ಪೋಸ್ಟ್‌ಗಳನ್ನು ಡಿಪ್ಯೂಟಿ ಟೈಪಿಸ್ಟ್ ಪೋಸ್ಟ್‌ಗಳನ್ನು ಡಿಪ್ಯೂಟಿ ಕಮಿಷನರ್ ಮುಖೇನ ಮಾಡಿರುತ್ತಾರೆ. ಕ್ಲಾಸ್ ೪ ಕ್ಕೆ ಕೂಡ ಕೆಲವು ಜನರಿಗೆ ಕೆಲಸವನ್ನು ಕೊಡುವಾಗ್ಗೆ ಸರ್ಕಾರದ ಡೈರೆಕ್ಷನ್ ಮುಖಾಂತರ ಮಾಡಿರುತ್ತಾರೆ. ಅವರಿಗೆ ಎಷ್ಟರ ಮಟ್ಟಿಗೆ ಪವರ್ಸ್ ಇರುತ್ತದೋ ಅದರಂತೆ ಮಾಡಿದ್ದಾರೆ. ತಮ್ಮ ಪ್ರಶ್ನೆ ಬಂದಾಗ ಅಧಿಕಾರಿಗಳ ಜೊತೆಯಲ್ಲಿ ಇದಕ್ಕೂ ಮುಂಚಿತವಾಗಿ ಹೇಳಿದ್ದೇನೆ. ೬೫೯ ಜನರ ಪೈಕಿ ೩೨೯ ಜನರಿಗೆ ಕೊಟ್ಟಿದ್ದೇವೆ. ಉಳಿದವರಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕೆಂದೂ ಕೂಡ ಹೇಳಿದ್ದೇವೆ. ಮುಂದೆ ೮೧–೮೨–ಅಸಿರಲ್ಲಿ ಕೂಡ ನೇಮಕಾತಿ ಮಾಡತಕ್ಕಂಥದ್ದು ಇದೆ, ಆಕ್ಟ್ರಾಯ್ ಬಂದಿಗೆ ಕೊಡಬೇಕಾದ ಆದ್ಯತೆಯನ್ನು ಕೊಡಲಾಗುತ್ತದೆ.

ಶ್ರೀ ಪಿ. ರಾಮದೇವ್.—ಟ್ಯಾಕ್ಸ್ ಪೇಯರ್ಸ್ ಬಂಡಿಯನ್ನು ವೇಸ್ಟ್ ಮಾಡುತ್ತಿದ್ದೀರಿ. ಸರ್ಪಲಸ್ ಸ್ಟಾಫ್ ಇದ್ದರೂ ಕ್ಲಾಸ್ ೪ ರಿಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಿರುವುದು ಹಣವನ್ನು ವ್ಯಯ ಮಾಡುವುದಕ್ಕಾಗಿ ಎಂದರೆ ತಪ್ಪಾಗಲಾರದು. ಪುಶ್ನೆ ರಿಕ್ರೂಟ್‌ಮೆಂಟ್ ಮಾಡುತ್ತಿದ್ದೀರಿ. That is my main point. They are idle. They are not working. You are paying salary and you say there is surplus staff. At the same time you are making fresh recruitments. It it not losting the tax-payers' money ?

ಶ್ರೀ ಧರ್ಮಸಿಂಗ್.—ಕೆಲಸ ಆಗಬೇಕೆಂದರೆ ಒಬ್ಬಂದಿಯನ್ನು ಜಾಸ್ತಿ ಮಾಡಬೇಕು. ಬಡಜನರಿಗೆ ಕಾರ್ಮಿಕರಿಗೆ ಕೆಲಸ ಕೊಡತಕ್ಕಂಥದ್ದನ್ನು ಗಮನಿಸಿ ಕೆಲಸವನ್ನು ಕೊಟ್ಟಿದ್ದೇವೆಯೇ ಹೊರತು ಬೇರೆ ಯಾವ ವಿಧವಾದ ಕಾರಣದಿಂದಲೂ ತೆಗೆದುಕೊಂಡಿಲ್ಲ.

ಶ್ರೀ ಎಂ. ಚಂದ್ರಶೇಖರ್,—ಅಧ್ಯಕ್ಷರೇ, ಕ್ಲಾಸ್ ೪ಕೆಲಸಕ್ಕೆ ಸುಮಾರು ೬೫೮ ಜನರನ್ನು ರಿಕ್ರೂಟ್‌ಮೆಂಟ್ ಮಾಡಿಕೊಂಡಿದ್ದೇವೆಂದು ಹೇಳಿದ್ದಾರೆ. ಗ್ಯಾಂಗ್‌ಮೆನ್ ಕೂಲಿ ಕಾರ್ಮಿಕರುಸುಮಾರು ಹತ್ತಾರು ವರ್ಷಗಳಿಂದಲೂ ಕಾರ್ಪೊರೇಷನ್‌ನಲ್ಲಿ ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿರುತ್ತಾರೆ. ಅವರಿಗೆ ಆದ್ಯತೆಯನ್ನು ಕೊಟ್ಟು ಫಿಲಪ್ ಮಾಡದೆ ಹೊಸದಾಗಿ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಕಾರಣವೇನು?.

ಶ್ರೀ ಧರ್ಮಸಿಂಗ್.—ಕಾರ್ಪೊರೇಷನ್‌ನಲ್ಲಿ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ಸ್ ಬಂದಾಗ ಬಡ ಜನರನ್ನು ತೆಗೆದುಕೊಳ್ಳಲು ಆದ್ಯತೆಯನ್ನು ಕೊಟ್ಟಿದ್ದೇವೆ, ಈಗ ಅದನ್ನೆಲ್ಲ ನಿಲ್ಲಿಸಿಬಿಟ್ಟಿರುತ್ತೇವೆ. ಈಗ ನೇಮಕಾತಿಯನ್ನು ಮಾಡುತ್ತಲೇ ಇಲ್ಲ. ಹಿಂದೆ ತೆಗೆದುಕೊಂಡದ್ದು ಬಡವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಹತ್ತಾರು ವರ್ಷಗಳಿಂದ ನಗರಸಭೆಯಲ್ಲಿ ಕೆಲಸ ಮಾಡತಕ್ಕ ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗಗಳವರಿಗೆ ಪರ್ಮನೆಂಟ್ ಮಾಡುವುದನ್ನು ಬಿಟ್ಟು ಹೊರಗಡೆಯವರನ್ನು ೩ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಕೆಲಸ ನೇಮಿಸಿಕೊಳ್ಳುತ್ತಿದ್ದಾರೆ. ಒಬ್ಬ ಗ್ಯಾಂಗ್‌ಮ್ಯಾನ್ ಹತ್ತಿರ ೩ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ೩ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ೧೪೦೦ ಪೌರ ಕಾರ್ಮಿಕರನ್ನು ಸೆಲೆಕ್ಟ್ ಮಾಡಬೇಕೆಂದು ಆದೇಶ ಕೊಟ್ಟು ರಿಕ್ರೂಟ್‌ಮೆಂಟ್ ಕಮಿಟಿಯನ್ನು ನಾಲ್ಕು ದಿವಸಗಳ ಹಿಂದೆ ಮಾಡಿದ್ದೇವೆ. ಹೊರಗಡೆ ಯವರು ಅಂದರೆ ಆಂಧ್ರಪ್ರದೇಶದವರು ಮತ್ತು ತಮಿಳುನಾಡು ಇಲ್ಲಿಂದ ಬಂದವರಿಗೆ ಡೈರೆಕ್ಟಾಗಿ ಕೆಲಸ ಕೊಡತಕ್ಕದ್ದು ಸರಿಯಲ್ಲ. ನಾವು ರೋಸ್ಟರ್ ಪ್ರಕಾರ ನಿಷ್ಪಕ್ಷಪಾತವಾಗಿ ನಮ್ಮಲ್ಲಿ ಕೆಲಸ ಮಾಡತಕ್ಕವರನ್ನೆ ನೇಮಕ ಮಾಡಿಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಸದಸ್ಯರಿಗೆ ಕೊಡುತ್ತಿದ್ದೇನೆ.

ಶ್ರೀ ಪಿ. ರಾಮದೇವ್.—ಕಮೀಷನರ್ ಪವರ್ಸ್‌ನ್ನು ಮಿಸ್‌ಯೂಸ್ ಮಾಡಿಕೊಳ್ಳುತ್ತಿದ್ದಾರೆ. There is misuse of powers. Will you order an enquiry to probe into this ? ಮಾನ್ಯ ಸದಸ್ಯರು ಹೇಳಿದ ಹಾಗೆ ೩ ಸಾವಿರದಿಂದ ೧೦ ಸಾವಿರ ರೂಪಾಯಿಗಳವರೆಗೂ ತೆಗೆದುಕೊಂಡು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—೧೯೭೭-೭೮, ೧೯೭೮-೭೯, ೧೯೭೯-೮೦ರಿಂದ ಕಾರ್ಪೊರೇಷನ್‌ನಲ್ಲಿ ಆ ತರಹ ಆಗಿಲ್ಲ. ಹಿಂದೆ ಆಗಿರಬಹುದು. ಈಗ ಆದೇಶ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಏನು ಆರೋಪ ಮಾಡುತ್ತಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪರಪ್ಪಕಳ್ಳಿಗುಡ್ಡ.—ಬೆಂಗಳೂರು ನಗರದಲ್ಲಿರತಕ್ಕ ಕಮೀಷನರ್‌ರವರು ಉತ್ತರ ಕರ್ನಾಟಕದ ಭಾಗದಲ್ಲಿದ್ದಾಗ ಬಹಳ ಬಿಗಿಯಿಂದ ಇದ್ದರು ಎಂದು ಜನರು ಹೇಳುತ್ತಿದ್ದರು. ತಾವೇನು ಈಗ ಉಲ್ಟಾ ಹೇಳುತ್ತಿದ್ದೀರೋ ಏನೋ ಗೊತ್ತಿಲ್ಲ.

(No Answer)

Construction of L.H. III Stage, Bangalore

154. B. V. RAMACHANDRA REDDY (Varthur).—Will the Minister for Public Works be pleased to state :—

(a) the estimated cost provided in the Budget during 1978-79 for construction of Legislator's Home, III Stage ;

(b) the final cost of estimate now (Reasons for increased cost be furnished) ;

(c) the total cubic meters of the following were used on the work :

(a) (1:5:10) concrete	(b) (1:4:8) concrete
(c) (1:3:6) concrete	(d) (1:2:4) concrete
(e) (1:1½:3) concrete	(f) (1:1:2) concrete
(g) (1:8) Mortar	(h) (1:6) Mortar
(i) (1:4) Mortar	(j) (1:3) Mortar

(d) total number of bags of cement allotted to the work and number of bags of cement actually used on the work ;

(e) quantity of jelly and sand used on the work be furnished;